## ಕಥೆ 3

**ಅಮ್ಮ** ಮೊದಲ ಬಾರಿ ಮನೆಗೆ ಖರ್ಜೂರ ತಂದಿದ್ದರು. ಊಟವಾದ ಮೇಲೆ ತಿನ್ನಲೆಂದು ಒಂದು ತಟ್ಟೆಯಲ್ಲಿ ಹಾಕಿ ಊಟದ ಟೇಬಲ್ಲಿನ ಮೇಲೆ ಇಟ್ಟಿದ್ದರು. ಎಂದೂ ಖರ್ಜೂರವನ್ನೇ ತಿಂದಿರದಿದ್ದ ಕಾವ್ಯ ಅವನ್ನು ನೋಡಿದಳು. ಅವುಗಳ ಬಣ್ಣ, ಆಕಾರ ಅವಳಿಗೆ ತುಂಬಾ ಇಷ್ಟವಾಗಿ, ತಿನ್ನಲು ಆಸೆಯಾಯಿತು. ಊಟದ ಮನೆಯಲ್ಲಿ ಯಾರೂ ಇರಲಿಲ್ಲ. ಮೆಲ್ಲನೆ ಖರ್ಜೂರದ ಸಮೀಪ ಬಂದ ಕಾವ್ಯಳಿಗೆ ಇನ್ನು ತಡೆಯಲಾಗಲಿಲ್ಲ. ಅದರಲ್ಲಿ ಕೆಲವನ್ನು ತೆಗೆದುಕೊಂಡು ತಿಂದುಬಿಟ್ಟಳು. ಊಟಕ್ಕೆ ಎಲ್ಲರೂ ಸೇರಿದಾಗ, ಕೆಲವು ಖರ್ಜೂರ ಕಡಿಮೆಯಾಗಿರುವುದನ್ನು ಅಮ್ಮ ಗಮನಿಸಿದರು. ಅದನ್ನು ಅಪ್ಪನಿಗೆ ಹೇಳಿದರು.

ಊಟ ಮಾಡುತ್ತಾ ಅಪ್ಪ, 'ಯಾರಾದರೂ ಖರ್ಜೂರ ತಿಂದಿದ್ದೀರಾ?' ಎಂದು ಪ್ರಶ್ನಿಸಿದರು.

ವಾಸು 'ಇಲ್ಲ' ಎಂದ. ಅಣ್ಣನನ್ನು ಅನುಸರಿಸಿ ಕಾವ್ಯಳೂ 'ಇಲ್ಲ' ಎಂದಳು. ಹಾಗೆ ಹೇಳುವಾಗ, ಏಟು ಬಿದ್ದಂತೆ ಅವಳ ಕೆನ್ನೆ ಕೆಂಪಾಗಿತ್ತು!

'ನಿಮ್ಮಲ್ಲಿ ಯಾರಾದರೂ ಖರ್ಜೂರ ತಿಂದಿದ್ದರೆ ಅದು ಒಳ್ಳೆಯದಲ್ಲ. ಸಧ್ಯ ನೀವು ತಿಂದಿಲ್ಲವಲ್ಲ, ಬಿಡಿ' ಎಂದರು ಅಪ್ಪ.

'ಏಕೆ ಒಳ್ಳೆಯದಲ್ಲ?' ಅಮ್ಮ ಕೇಳಿದರು.

'ಖರ್ಜೂರದಲ್ಲಿ ಬೀಜಗಳಿದ್ದವಲ್ಲ, ಅವು ಹೊಟ್ಟೆಯೊಳಗೆ ಹೋಗಿದ್ದರೆ, ಬೆಳಿಗ್ಗೆ ಏಳುವುದರೊಳಗೆ, ಖರ್ಜೂರದ ಮರ ತಿಂದವರ ಹೊಟ್ಟೆಯಲ್ಲಿ ಬೆಳೆದುಬಿಡುತ್ತದೆ. ಅದಕ್ಕೆ ನಾನು ಹೆದರಿದ್ದೆ, ಅಷ್ಟೆ!' ಎಂದರು ಅಪ್ಪ.

ತಟ್ಟೆಯ ಕಡೆ ನೋಡುತ್ತಲೇ ಕಾವ್ಯ 'ಓ, ನನಗೇನೂ ಭಯವಿಲ್ಲ, ನಾನು ಬೀಜಗಳನ್ನು ಕಿಟಕಿಯಿಂದ ಹೊರಗೆ ಎಸದುಬಿಟ್ಟೆ' ಎಂದಳು!

ಎಲ್ಲರೂ ನಕ್ಕರು. ಏಕೆಂದು ತಿಳಿದಾಗ ಕಾವ್ಯಳ ಕಣ್ಣಲ್ಲಿ ನೀರಿತ್ತು.

